(11)

**4017/5073/6033/7033**

**Third Semester 3 Year LL.B./VII Semester 5 Year B.A. LL.B. (Maj.-Min. System)/B.B.A. LL.B./B.Com. LL.B. Examination, Oct./Nov. 2022 (June 2022)**
**CRIMINAL LAW – II – Cr. P.C. J.J. ACT AND P.O. ACT**

Duration : 3 Hours Max. Marks : 80

**Instructions : 1. Answer all five questions.**
**ಸೂಚನೆಗಳು :** ಎಲ್ಲಾ ಐದು ಪ್ರಶ್ನೆಗಳನ್ನು ಉತ್ತರಿಸಿರಿ.

**2. One essay type question and short note/problems is compulsory from each Unit.**
ಪ್ರತಿಯೊಂದು ಘಟಕದಿಂದ ಒಂದು ಪ್ರಬಂಧ ಸ್ವರೂಪದ ಮತ್ತು ಲಘು ಟಿಪ್ಪಣಿ ಸ್ವರೂಪದ/ಸಮಸ್ಯೆಗಳನ್ನು ಕಡ್ಡಾಯವಾಗಿ ಬರೆಯಿರಿ.

**3. Figures to the right indicate marks.**
ಬಲಕ್ಕೆ ತೋರಿಸಿರುವ ಅಂಕಿಗಳು ಅಂಕಗಳಾಗಿವೆ.

**4. Answer should be written either in English or Kannada completely.**
ಉತ್ತರಗಳನ್ನು ಸಂಪೂರ್ಣವಾಗಿ ಕನ್ನಡದಲ್ಲಾಗಲಿ ಅಥವಾ ಇಂಗ್ಲೀಷ್‌ನಲ್ಲಾಗಲಿ ಬರೆಯಬೇಕು.

UNIT – I

**ಘಟಕ – I**

Q. No. 1. a) Explain the constitution and powers of criminal court. Marks : 10
ಅಪರಾಧಿಕ ನ್ಯಾಯಾಲಯಗಳ ರಚನೆ ಮತ್ತು ಅವುಗಳ ಅಧಿಕಾರಗಳನ್ನು ವಿವರಿಸಿರಿ.

OR/ಅಥವಾ

Explain the first information report and discuss its evidentiary value.
ಪ್ರಥಮ ವರ್ತಮಾನವನ್ನು ವಿವರಿಸಿರಿ ಮತ್ತು ಅದರ ಸಾಕ್ಷೀಯ ಮೌಲ್ಯವನ್ನು ಚರ್ಚಿಸಿರಿ.

**P.T.O.**

Q. No. 1. b) A magistrate convicts an accused after following all procedure but without hearing the accused on sentence. Is this punishment lawfull ? Decide. Marks : 6

ಒಬ್ಬ ದಂಡಾಧಿಕಾರಿಯು ಎಲ್ಲಾ ನಿಯಮಗಳನ್ನು ಅನುಸರಿಸಿ ಶಿಕ್ಷೆಯ ಬಗ್ಗೆ ಆಪಾದಿತನಿಗೆ ಹೇಳಿಕೆಗೆ ಅವಕಾಶ ಕೊಡದೆ ಆತನಿಗೆ ಶಿಕ್ಷಾದೇಶ ನೀಡುತ್ತಾನೆ. ಈ ಶಿಕ್ಷೆಯು ಕಾನೂನು ಬದ್ಧವಾಗಿದೆಯೇ – ನಿರ್ಧರಿಸಿರಿ.

OR/ಅಥವಾ

Write a note on rules relating to search and arrest.

ಶೋಧ ಮತ್ತು ದಸ್ತಗಿರಿಗೆ ಸಂಬಂಧಿಸಿದ ನಿಯಮಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

## UNIT – II
## ಘಟಕ – II

Q. No. 2. a) What is taking cognizance of offence ? Discuss the limitations on the powers of court to take cognizance of an offence. Marks : 10

ಅಪರಾಧ ಸಂಜ್ಞೆ ತೆಗೆದುಕೊಳ್ಳುವಿಕೆ ಎಂದರೇನು ? ಒಂದು ಅಪರಾಧದ ಸಂಜ್ಞೆ ತೆಗೆದುಕೊಳ್ಳುವಲ್ಲಿ ನ್ಯಾಯಾಲಯಕ್ಕೆ ಇರುವ ಅಧಿಕಾರಗಳ ಮಿತಿಗಳನ್ನು ಚರ್ಚಿಸಿರಿ.

OR/ಅಥವಾ

"Separate charge is the rule and joinder of charge is the exception" – Comment.

''ಆರೋಪವನ್ನು ಪ್ರತ್ಯೇಕವಾಗಿ ಮಾಡುವುದು ನಿಯಮ ಮತ್ತು ಆರೋಪಗಳ ಜೋಡಿಸುವಿಕೆಯು ಒಂದು ಅಪವಾದ'' – ಈ ತತ್ವವನ್ನು ಪರಾಮರ್ಶಿಸಿರಿ.

Q. No. 2. b) 'A' commits robbery on 'B' and in doing so voluntarily causes hurt to him. Can he be separately charged and convicted for these offences in the same trial ? Decide. Marks : 6

'ಅ'ನು 'ಬ'ನ ಮೇಲೆ ದರೋಡೆ ಮಾಡುತ್ತಾನೆ ಮತ್ತು ಹಾಗೆ ಮಾಡುವಾಗ ಅವನನ್ನು ಐಚ್ಛಿಕವಾಗಿ ಗಾಯಗೊಳಿಸುತ್ತಾನೆ. ಈ ಅಪರಾಧಗಳಿಗೆ 'ಅ'ನನ್ನು ಪ್ರತ್ಯೇಕ ಆರೋಪಗಳಿಗಾಗಿ ಒಂದೇ ವಿಚಾರಣೆಯಲ್ಲಿ ಶಿಕ್ಷೆಗೆ ಗುರಿಪಡಿಸಬಹುದೇ ? ತೀರ್ಮಾನಿಸಿ.

OR/ಅಥವಾ

'A' makes an application for regular bail in the court of session. The application is rejected. Now he wants to make a fresh application for anticipatory bail under Section 438 Cr. P.C. in the High Court. Advice him.

'ಅ'ನು ಸತ್ರ ನ್ಯಾಯಾಲಯದಲ್ಲಿ ನಿಯಮಿತ ಜಾಮೀನಿಗಾಗಿ ಅರ್ಜಿ ಹಾಕಿಕೊಳ್ಳುತ್ತಾನೆ. ಆ ಅರ್ಜಿಯು ತಿರಸ್ಕಾರಗೊಳ್ಳುತ್ತದೆ. ಈಗ ಆತನು ದಂಡ ಪ್ರಕ್ರಿಯಾ ಸಂಹಿತೆಯ ಕಲಮು 438 ರಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೊಸದಾಗಿ ಉಚ್ಚ ನ್ಯಾಯಾಲಯದಲ್ಲಿ ಹಾಕಿಕೊಳ್ಳಲು ತೀರ್ಮಾನಿಸುತ್ತಾನೆ. 'ಅ'ನಿಗೆ ಸಲಹೆ ನೀಡಿ.

## UNIT – III
## ಘಟಕ – III

Q. No. 3. a) Discuss the provisions relating to the maintenance of wives, children and parents under Cr. P.C. Marks : 10

ದಂಡ ಪ್ರಕ್ರಿಯಾ ಸಂಹಿತೆಯಡಿಯಲ್ಲಿ ಹೆಂಡಿರು, ಮಕ್ಕಳು ಮತ್ತು ತಂದೆ ತಾಯಂದಿರುಗಳನ್ನು ಪೋಷಿಸುವ ಕುರಿತಾದ ಉಪಬಂಧಗಳನ್ನು ಚರ್ಚಿಸಿರಿ.

OR/ಅಥವಾ

Describe the provisions of Cr. P.C. relating to the security for keeping peace and good behaviour.

ಶಾಂತಿ ಪಾಲನೆ ಮತ್ತು ಒಳ್ಳೆಯ ನಡತೆಯ ಭದ್ರತೆಗೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆಯ ಉಪ ಬಂಧಗಳನ್ನು ವಿವರಿಸಿರಿ.

Q. No. 3. b) 'C' is the married daughter of 'K' and 'L' who lives in her husbands home. Now the parents 'K' and 'L' file an application before the magistrate court claiming maintenance under Section 125 of Cr. P.C. from 'C' married daughter. Decide with reasons. Marks : 6

'C'ಯು 'K' ಮತ್ತು 'L'ರ ವಿವಾಹಿತ ಮಗಳಾಗಿದ್ದು ತನ್ನ ಗಂಡನ ಮನೆಯಲ್ಲಿ ಜೀವಿಸುತ್ತಿದ್ದಾಳೆ. ಈಗ 'K' ಮತ್ತು 'L' ವಿವಾಹಿತ ಮಗಳಾದ 'C'ಯಿಂದ ಜೀವನಾಂಶವನ್ನು ಕೇಳಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ ಕಲಮು 125 ರಡಿಯಲ್ಲಿ ಅರ್ಜಿ ಸಲ್ಲಿಸುತ್ತಾರೆ. ಕಾರಣ ಸಹಿತ ತೀರ್ಮಾನಿಸಿರಿ.

OR/ಅಥವಾ

Write the provisions relating to judgement.

ತೀರ್ಪಿನ ಕುರಿತಾದ ಉಪಬಂಧಗಳನ್ನು ಬರೆಯಿರಿ.

UNIT – IV
ಘಟಕ – IV

Q. No. 4. a) Explain the provisions of Cr. P.C. relating to disposal of property. Marks : 10
ಸ್ವತ್ತಿನ ವಿಲೇವಾರಿಗೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ವಿವರಿಸಿರಿ.

OR/ಅಥವಾ

Explain the provisions relating to the suspension, remission and commutation of sentence under Cr. P.C.
ಅಪರಾಧಿಕ ಪ್ರಕ್ರಿಯಾ ಸಂಹಿತೆಯಡಿಯಲ್ಲಿ ಶಿಕ್ಷೆಯ ತಡೆಹಿಡಿಯುವಿಕೆ, ಕ್ಷಮಾಪಣೆ ಮತ್ತು ಬದಲಾವಣೆ ಮಾಡುವ ಕುರಿತು ಇರುವ ಉಪಬಂಧಗಳನ್ನು ವಿವರಿಸಿರಿ.

Q. No. 4. b) Irregular proceedings. Marks : 6
ಕ್ರಮಬದ್ಧವಲ್ಲದ ವ್ಯವಹರಣೆಗಳು.

OR/ಅಥವಾ

Plea bargaining.
ಶಿಕ್ಷೆಯ ಚೌಕಾಶಿ (ಮನವಿ ಚೌಕಾಸಿ).

UNIT – V
ಘಟಕ – V

Q. No. 5. a) Discuss the scope and objects of the Probation of Offenders Act, 1958. Marks : 10
1958 ರ ಅಪರಾಧಿಗಳ ಪರಿವೀಕ್ಷಣಾ ಕಾಯಿದೆಯ ವ್ಯಾಪ್ತಿ ಮತ್ತು ಉದ್ದೇಶಗಳನ್ನು ಚರ್ಚಿಸಿರಿ.

OR/ಅಥವಾ

Explain the provisions under the Juvenile Justice (Care and Protection) Act relating to rehabilitation and social integration.
ಮಕ್ಕಳ ಪುನರ್ವಸತಿ ಮತ್ತು ಸಮಾಜದ ಮುಖ್ಯವಾಹಿನಿಗೆ ತರುವುದಕ್ಕೆ ಸಂಬಂಧಿಸಿದ ಬಾಲನ್ಯಾಯ (ಕಾಳಜಿ ಮತ್ತು ರಕ್ಷಣಾ) ಅಧಿನಿಯಮದಲ್ಲಿನ ಉಪಬಂಧಗಳನ್ನು ವಿವರಿಸಿರಿ.

Q. No. 5. b) Observation homes. Marks : 6
ನಿರೀಕ್ಷಣಾ ತಾಣ/ಗೃಹ.

OR/ಅಥವಾ

Release on good behaviour.
ಸನ್ನಡತೆ ಮೇಲೆ ಬಿಡುಗಡೆ.